# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ಜಯಲಕ್ಷ್ಮೀಪುರಂ ರಸ್ತೆ, ಮೈಸೂರು – 570 005

## ವಸತಿ ವಿನ್ಯಾಸ ನಕ್ಷೆಯ ತಾತ್ಕಾಲಿಕ ಅನುಮತಿ ಆದೇಶ

ವಿಷಯ: ಮೈಸೂರು ತಾಲ್ಲೋಕು, ಕಸಬಾ ಹೋಬಳಿ, **ಚಿಕ್ಕಹರದನಹಳ್ಳಿ** ಗ್ರಾಮದ ಸರ್ವೆ ನಂ.16/1ಬಿರಲ್ಲಿ **0–24.5ಗುಂಟೆ** ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನಪತ್ರ ಸಂಖ್ಯೆ: LCCP100061/2018, ದಿ:17–10–2018.

2) ಪ್ರಾಧಿಕಾರದ ಸಭೆಯ ದಿ:10–05–2019 & ದಿ:20–05–2018ರ, ವಿಷಯ ಸಂಖ್ಯೆ 83ರ ನಿರ್ಣಯ.

*–*–*–*–*–*

## ಪ್ರಸ್ತಾವನೆ:

ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ತಾಲ್ಲೋಕು, ಕಸಬಾ ಹೋಬಳಿ, **ಚಿಕ್ಕಹರದನಹಳ್ಳಿ** ಗ್ರಾಮದ ಸರ್ವೆ ನಂ.16/1ಬಿರಲ್ಲಿ **0–24.5ಗುಂಟೆ** ಜಮೀನಿಗೆ ಉಲ್ಲೇಖ(1)ರ ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರದಲ್ಲಿ ವಸತಿ ಉದ್ದೇಶಕ್ಕೆ ಅನ್ಯಕ್ರಾಂತ ಆದೇಶವಾಗಿರುತ್ತದೆ. ಉಲ್ಲೇಖ(2)ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನಿಗೆ ನಿಯಮಾನುಸಾರ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನವಾಗಿರುತ್ತದೆ. ಅದರಂತೆ, ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 17ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಪ್ರಕರಣ 32ರನ್ವಯ, ಪ್ರಾಧಿಕಾರಕ್ಕೆ ಹಸ್ತಾಂತರಿಸಬೇಕಾದ ನಾಗರೀಕ ಸೌಕರ್ಯ ನಿವೇಶನ, ಉದ್ಯಾನವನ ಹಾಗೂ ರಸ್ತೆಗಳ ಪ್ರದೇಶವನ್ನು ಪ್ರಾಧಿಕಾರದಲ್ಲಿರುವ ಹೆಚ್ಚುವರಿ ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಯ 1ನೇ ಪುಸ್ತಕದ ದಸ್ತಾವೇಜು ಸಂಖ್ಯೆ **MDA-1-01435-2019-20**ಆಗಿ ಸಿ.ಡಿ.ನಂಬರ್ **MDAD297**ನೇದ್ದರಲ್ಲಿ **ದಿನಾಂಕ:03–02–2020**ರಂದು ಪರಿತ್ಯಜನಾ ಪತ್ರ ನೊಂದಾಯಿಸುವ ಮೂಲಕ ಹಸ್ತಾಂತರಿಸಿಕೊಳ್ಳಲಾಗಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಮೈನಪ್ರಾ:ನಯೋಶಾ:ವಿನ್ಯಾಸ:** 76 **:2019–20, ದಿನಾಂಕ:** 26-2-2020

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, **ಚಿಕ್ಕಹರದನಹಳ್ಳಿ** ಗ್ರಾಮದ ಸರ್ವೆ ನಂ.16/1ಬಿರಲ್ಲಿ **0–24.5ಗುಂಟೆ** ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 17–2(ಎ)ರನ್ವಯ ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987ರ ಪ್ರಕರಣ 32ರನ್ವಯ **ಈ** ಕೆಳಕಂಡ ಷರತ್ತುಗಳಿಗೆ ಒಳಪಟ್ಟು ವಸತಿ ಉದ್ದೇಶದ ಬಡಾವಣೆಯನ್ನು ಅಭಿವೃದ್ಧಿಪಡಿಸಲು ವಿನ್ಯಾಸ ನಕ್ಷೆಗೆ ತಾತ್ಕಾಲಿಕವಾಗಿ ಅನುಮತಿ ಆದೇಶ ನೀಡಲಾಗಿದೆ.

**ಷರತ್ತುಗಳು:**

1. ಈ ಪತ್ರದೊಂದಿಗೆ ಅಭಿವೃದ್ಧಿಪಡಿಸಬೇಕಾದ ವಿನ್ಯಾಸ ನಕ್ಷೆಯನ್ನು ನೀಡಲಾಗುತ್ತಿದ್ದು, ಅದರಲ್ಲಿನ ನಿವೇಶನಗಳನ್ನು ಪರಭಾರೆ ಮಾಡತಕ್ಕದ್ದಲ್ಲ ಹಾಗೂ ಕಟ್ಟಡ ನಿರ್ಮಾಣ ಕೆಲಸಗಳನ್ನು ಪ್ರಾರಂಭಿಸತಕ್ಕದಲ್ಲ.
2. ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.
3. ಬಡಾವಣೆ ಕಾಮಗಾರಿಯನ್ನು ಪ್ರಾರಂಭಿಸುವ ಮೊದಲು ಪ್ರಾಧಿಕಾರದಿಂದ ಕಾಮಗಾರಿ ಕಾರ್ಯಾದೇಶವನ್ನು ಪಡೆಯತಕ್ಕದ್ದು ಹಾಗೂ ಅದರಂತೆ ಅಭಿವೃದ್ಧಿಪಡಿಸುವುದು. ವಿನ್ಯಾಸದಲ್ಲಿನ ರಸ್ತೆ ಕಾಮಗಾರಿಗಳನ್ನು ಪ್ರಾಧಿಕಾರದ ತಾಂತ್ರಿಕ ಶಾಖೆಯ ನಿರ್ದೇಶನಗಳ ಪ್ರಕಾರ ಪೂರ್ಣಗೊಳಿಸತಕ್ಕದ್ದು.
4. ಬಡಾವಣೆ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರವು ವಿಧಿಸುವ ಇತರೇ ಶುಲ್ಕಗಳನ್ನು ಪಾವತಿಸತಕ್ಕದ್ದು. ಬಡಾವಣೆ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಪ್ರಾಧಿಕಾರದ ತಾಂತ್ರಿಕ ಶಾಖೆಯಿಂದ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
5. ಬಡಾವಣೆಯಲ್ಲಿ ಮಳೆ ನೀರು ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಕಲ್ಪಿಸತಕ್ಕದ್ದು.
6. ಕುಡಿಯುವ ನೀರು ಸರಬರಾಜು ಮತ್ತು ಮಲಿನ ನೀರು ಶುದ್ಧೀಕರಿಸುವ ಘಟಕವನ್ನು ಸೂಕ್ತವಾಗಿ ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅನುಮತಿ ಪಡೆದು ಅದರ ನಿರ್ದೇಶನದನ್ವಯ ಕಾರ್ಯ ನಿರ್ವಹಿಸಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

7. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಮಂಡಳಿಯಿಂದ ಅನುಮತಿ ಪಡೆದು ಅದರ ನಿರ್ದೇಶನ... ನಿರ್ವಹಿಸಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
8. ಬಡಾವಣೆಯಲ್ಲಿನ ರಸ್ತೆಗಳ ಎರಡೂ ಬದಿಗಳಲ್ಲಿ ಹಾಗೂ ಉದ್ಯಾನವನಗಳಲ್ಲಿ ಗಿಡ/ಮರಗಳನ್ನು ಬೆಳೆಸತಕ್ಕದ್ದು.
9. ಈ ಸಂದರ್ಭದಲ್ಲಿ ಇರುವ ಕಾನೂನಿನ ಅಡಿಯಲ್ಲಿ ಹಾಗೂ ಅರ್ಜಿದಾರರು ಸಲ್ಲಿಸಿರುವ ದಾಖಲೆಗಳ ಮತ್ತು ಮಾ... ಆಧಾರದ ಮೇಲೆ ವಸತಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಲಾಗಿದೆ. ಯಾವುದೇ ಕಾನೂನಾತ್ಮಕ ತಕರಾರುಗಳಿಗೆ ಅರ್ಜಿದಾರರ... ಹೊಣೆಗಾರರಾಗಿದ್ದು, ಪ್ರಾಧಿಕಾರ ಜವಾಬ್ದಾರಿಯಾಗುವುದಿಲ್ಲ.
10. ಬಡಾವಣೆಯ ಸುತ್ತಾ ಆವರಣ ಗೋಡೆ ನಿರ್ಮಿಸುವಂತಿಲ್ಲ ಹಾಗೂ ನಕ್ಷೆಯಲ್ಲಿ ತೋರಿಸಿರುವ ರಸ್ತೆಗಳಿಗೆ ಅಡ್ಡಲಾಗಿ ಯಾವುದೇ ತಡೆಗೋಡೆಗಳನ್ನು ನಿರ್ಮಿಸದೇ ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿಡತಕ್ಕದ್ದು.
11. ಮೇಲ್ಕಂಡ ಸರ್ವೆ ನಂಬರ್‌ಗಳಲ್ಲಿ ಇರುವ ಖರಾಬು ಜಾಗವು ಸರ್ಕಾರಿ ಜಮೀನಾಗಿದ್ದು, ಆ ಪ್ರದೇಶವನ್ನು ಖುಲ್ಲಾ ಇಡತಕ್ಕದ್ದು.
12. ಅರ್ಜಿದಾರರು ಯಾವುದೇ ಅಸತ್ಯ ದಾಖಲೆ ನೀಡಿರುವುದು ಕಂಡುಬಂದಲ್ಲಿ ಅಥವಾ ಮೇಲ್ಕಂಡ ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಮಂಜೂರಾತಿಯು (ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 76(೦)ರಂತೆ) ತನ್ನಂತೆ ತಾನೇ ರದ್ದುಗೊಳ್ಳುತ್ತದೆ ಎಂದು ತಿಳಿಯತಕ್ಕದ್ದು.
13. ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ಸಂಬಂಧ ಶುಲ್ಕದ ಬಗ್ಗೆ ಲೆಕ್ಕ ತಪಾಸಣಾ ಕಾಲದಲ್ಲಿ ಆಕ್ಷೇಪಣೆ ಬಂದಲ್ಲಿ ಆಕ್ಷೇಪಣಾ ಮೊಬಲಗನ್ನು ಪಾವತಿಸಬೇಕೆಂಬ ಷರತ್ತಿಗೆ ಒಳಪಟ್ಟಿರುತ್ತದೆ.
14. ಈ ನಕ್ಷೆಯನ್ನು ಬಡಾವಣೆ ಅಭಿವೃದ್ಧಿಪಡಿಸಲು ಮಾತ್ರ ಉಪಯೋಗಿಸತಕ್ಕದ್ದು, ಅಂತಿಮ ನಕ್ಷೆ ಅನುಮೋದನೆಯಾಗುವವರೆಗೂ ಯಾವುದೇ ನಿವೇಶನಗಳ ಮಾರಾಟವನ್ನು/ನೋಂದಣಿಯನ್ನು ಮಾಡತಕ್ಕದ್ದಲ್ಲ.
15. **ವಿನ್ಯಾಸವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿದ ನಂತರ, ಕಾಮಗಾರಿಗಳು ತೃಪ್ತಿಕರವಾಗಿ ಪೂರ್ಣಗೊಂಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸಿ, ಪ್ರಾಧಿಕಾರದಿಂದ ಅಂತಿಮ ವಿನ್ಯಾಸ ನಕ್ಷೆಯ ಅನುಮೋದನೆ ಪಡೆಯತಕ್ಕದ್ದು.**

**ನಗರ ಯೋಜಕ ಸದಸ್ಯರು**
**ನಗರಾಭಿವೃದ್ಧಿ ಪ್ರಾಧಿಕಾರ ಮೈಸೂರು**

**ಶ್ರೀ ಬಿ.ಭೈರಪ್ಪ ಬಿನ್ ಬಿ.ಬೋರಯ್ಯ ನಂ.2847/6, 3ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಜಯನಗರ, ಮೈಸೂರು.**

<u>ಯಥಾ ಪ್ರತಿಯನ್ನು:</u>

1. ಅಭಿಯಂತರ ಸದಸ್ಯರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
2. ಅಧೀಕ್ಷಕ ಅಭಿಯಂತರರು, ಚೆಸ್ಕಾಂ, ಮೈಸೂರು ವೃತ್ತ, ಕುವೆಂಪುನಗರ, ಮೈಸೂರು ರವರ ಮಾಹಿತಿಗಾಗಿ ಕಳುಹಿಸುತ್ತಾ, ಸದರಿಯವರು ವಿದ್ಯುತ್ ಕಾಮಗಾರಿ ಪೂರ್ಣಗೊಳಿಸಿದ ನಂತರ ಕಾಮಗಾರಿ ಮುಕ್ತಾಯವಾಗಿರುವ ಬಗ್ಗೆ ದೃಢೀಕರಣ/ನಿರಾಕ್ಷೇಪಣಾ ಪತ್ರವನ್ನು ಈ ಕಛೇರಿಗೆ ಕಳುಹಿಸಿಕೊಡುವಂತೆ ಕೋರಿದೆ.
3. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, JN NURM ನಗರ ವಿಭಾಗ, ವಾಣಿ ವಿಲಾಸ ನೀರು ಸರಬರಾಜು ಮಂಡಳಿ ಆವರಣ, ಕೆ.ಆರ್.ಎಸ್.ರಸ್ತೆ, ಯಾದವಗಿರಿ, ಮೈಸೂರು ಇವರಿಗೆ ಮಾಹಿತಿಗಾಗಿ ಕಳುಹಿಸುತ್ತಾ, ಸದರಿಯವರು ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಕಾಮಗಾರಿ ಮುಕ್ತಾಯವಾಗಿರುವ ಬಗ್ಗೆ ದೃಢೀಕರಣ/ನಿರಾಕ್ಷೇಪಣಾ ಪತ್ರವನ್ನು ಈ ಕಛೇರಿಗೆ ಕಳುಹಿಸಿಕೊಡುವಂತೆ ಕೋರಿದೆ.
4. ವಲಯಾಧಿಕಾರಿಗಳು, ವಲಯ ಕಛೇರಿ-01, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ
5. ಕಛೇರಿ ಪ್ರತಿ.

27/1/20

**ನಗರ ಯೋಜಕ ಸದಸ್ಯರು**

Div E.Nakshe anumodane 2018-19_Nakshe anumodane Provisional Plan

ರವಾನೆ ದಿನಾಂಕ 2/3/2020